# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 534

ಸದಸ್ಯರ ಹೆಸರು : ಶ್ರೀಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ)

ಉತ್ತರಿಸುವ ದಿನಾಂಕ : 13.12.2018.

ಉತ್ತರಿಸುವ ಸಚಿವರು : ಮುಖ್ಯಮಂತ್ರಿಗಳು.

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ದೈಹಿಕ ಶಿಕ್ಷಕರನ್ನು ಎಲ್ಲಾ ಶಿಕ್ಷಕರಂತೆ ಶಿಕ್ಷಕರೆಂದು ಪರಿಗಣಿಸಲಾಗುವುದೇ; | ದೈಹಿಕ ಶಿಕ್ಷಣ ಶಿಕ್ಷಕರನ್ನು ಸಹಶಿಕ್ಷಕರು(ದೈಹಿಕ ಶಿಕ್ಷಣ) ಎಂದು ಪರಿಗಣಿಸುವ ಸಂಬಂಧ ಸಾರ್ವಜನಿಕ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಸಮಗ್ರ ತಿದ್ದುಪಡಿ ತರುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ. |
| ಆ. | ಹಾಗಿದ್ದಲ್ಲಿ ಅವರಿಗೆ ಇತರ ಶಿಕ್ಷಕರಂತೆ ಸೇವಾ ಬಡ್ತಿಯನ್ನು ಪರಿಗಣಿಸ ಲಾಗುವುದೇ; | |
| ಇ. | ಪದವಿ ಪೂರ್ವ ಶಿಕ್ಷಣ ಕಾಲೇಜುಗಳ ಅನುದಾನಿತ ಶಾಲೆಯ ಶಿಕ್ಷಕರುಗಳಿಗೆ ಸರ್ಕಾರಿ ಪದವಿ ಪೂರ್ವ ಕಾಲೇಜಿನ ದೈಹಿಕ ಶಿಕ್ಷಕರ ಸಮಾನ ವೇತನ ನೀಡದಿರಲು ಕಾರಣವೇನು; | ಪದವಿ ಪೂರ್ವ ಶಿಕ್ಷಣ ಇಲಾಖೆಯ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿನ ದೈಹಿಕ ಶಿಕ್ಷಕರ ಹುದ್ದೆಯನ್ನು ಸರ್ಕಾರದ ಆದೇಶ ಸಂಖ್ಯೆ:ಇಡಿ 35 ಡಿಜಿಒ 2009 (ಭಾಗ-1) ದಿನಾಂಕ:18.05.2013ರಲ್ಲಿ ದೈಹಿಕ ಶಿಕ್ಷಣ ಉಪನ್ಯಾಸಕರ ಹುದ್ದೆಯನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ. ಅದರಂತೆ, ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 35 ಡಿಜಿಒ 2009 ದಿನಾಂಕ 15.05.2014ರನ್ವಯ ದಿನಾಂಕ:29.05.2014 ರಿಂದ ಜಾರಿಗೊಳಿಸಲಾಗಿರುವ ಪರಿಷ್ಕೃತ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ರೂ.22800-43200 ವೇತನ ಶ್ರೇಣಿಯ(2012ರ ವೇತನ ಶ್ರೇಣಿ) 20 ದೈಹಿಕ ಶಿಕ್ಷಣ ಉಪನ್ಯಾಸಕರ ಹುದ್ದೆಗಳನ್ನು ಅಳವಡಿಸಿ, ನೇಮಕಾತಿ ಕಾರ್ಯವಿಧಾನವನ್ನು ನಿಗಧಿಪಡಿಸಲಾಗಿದೆ. ಅದರನ್ವಯ ಈ ಹುದ್ದೆಗೆ ಈ ಹಿಂದೆ ನಿಗಧಿಪಡಿಸಲಾಗಿದ್ದ ಬಿಪಿಇಡಿ ವಿದ್ಯಾರ್ಹತೆಯ ಬದಲು ಎಂಪಿಇಡಿ ವಿದ್ಯಾರ್ಹತೆಯನ್ನು ನಿಗಧಿಪಡಿಸಲಾಗಿದೆ. ಸದರಿ ಹುದ್ದೆಗೆ ನೇಮಕಾತಿ ಮಾಡಿರುವುದಿಲ್ಲ.<br><br>ಪದವಿ ಪೂರ್ವ ಶಿಕ್ಷಣ ಇಲಾಖೆಯ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ದೈಹಿಕ ಶಿಕ್ಷಕರ ಹುದ್ದೆ ಇದ್ದು, ಈ ಹುದ್ದೆಗಳಿಗೆ ಹಿಂದಿನ ನಿಯಮಗಳನ್ವಯ ನಿಗಧಿಪಡಿಸಿದಂತೆ ಬಿಪಿಇಡಿ ವಿದ್ಯಾರ್ಹತೆಯನ್ನು ಮಾನದಂಡದನ್ವಯ ನೇಮಕ ಗೊಂಡಿರುವ ದೈಹಿಕ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಈ ಪೈಕಿ ಕೆಲವು ದೈಹಿಕ ಶಿಕ್ಷಕರು ಎಂಪಿಇಡಿ ಪದವಿಯನ್ನು ಹೊಂದಿದ್ದು, ಇನ್ನೂ ಕೆಲವು ದೈಹಿಕ ಶಿಕ್ಷಕರು ಎಂಪಿಇಡಿ ಪದವಿಯನ್ನು ಹೊಂದಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಅನುದಾನಿತ ಪದವಿ ಪೂರ್ವ |
| ಈ. | ಈ ತಾರತಮ್ಯವನ್ನು ಸರಿಪಡಿಸಲು ಸರ್ಕಾರ ತೆಗೆದುಕೊಳ್ಳಲು ಉದ್ದೇಶಿ ಸಿರುವ ಕ್ರಮಗಳೇನು; | |

| | | |
|---|---|---|
| | | ಕಾಲೇಜುಗಳ ದೈಹಿಕ ಶಿಕ್ಷಕರಿಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ದೈಹಿಕ ಶಿಕ್ಷಣ ಉಪನ್ಯಾಸಕರ ವೇತನ ಶ್ರೇಣಿ ರೂ.22800–43200 (ಪರಿಷ್ಕೃತ ವೇತನ ಶ್ರೇಣಿ ರೂ.43100–83900) ನಿಗಧಿಪಡಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ. |
| ಉ. | ಅನುದಾನಿತ ಶಾಲಾ ಕಾಲೇಜುಗಳಲ್ಲಿ 240 ವಿದ್ಯಾರ್ಥಿಗಳಿಗೆ ಬದಲಾಗಿ 100 ವಿದ್ಯಾರ್ಥಿಗಳಿಗೆ ಒಬ್ಬರಂತೆ ದೈಹಿಕ ಶಿಕ್ಷಕರನ್ನು ಅನುದಾನಕ್ಕೆ ಒಳಪಡಿಸಲಾಗುವುದೇ? | ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 71 ಟಿಪಿಯು 2013 ದಿನಾಂಕ:30–07–2014ರಲ್ಲಿ ರಚಿಸಲಾಗಿರುವ The Karnataka Pre-University Education (Academic, Registration, Administration and Grant-in-aid etc.,) (Amendment) Rules, 2014 ರನ್ವಯ ರಾಜ್ಯದ ಖಾಸಗಿ ಪದವಿ ಪೂರ್ವ ಕಾಲೇಜುಗಳ ಸಿಬ್ಬಂದಿ ಮಾದರಿಯಲ್ಲಿ ದೈಹಿಕ ಶಿಕ್ಷಕರ ಹುದ್ದೆಯನ್ನು ಸೇರ್ಪಡೆ ಮಾಡಿ, ಪ್ರಥಮ ಮತ್ತು ದ್ವಿತೀಯ ಪಿ.ಯು.ಸಿ. ತರಗತಿಗಳು ಸೇರಿ 100 ವಿದ್ಯಾರ್ಥಿಗಳ ಸಂಖ್ಯೆ ಇರುವ ಕಾಲೇಜುಗಳಲ್ಲಿ ಒಂದು ದೈಹಿಕ ಶಿಕ್ಷಕರ ಹುದ್ದೆಗೆ ಅವಕಾಶ ಕಲ್ಪಿಸಲಾಗಿದೆ.<br><br>ಮುಂದುವರೆದು, ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 184 ಟಿಪಿಯು 2016 ದಿನಾಂಕ:23.06.2016 ರಲ್ಲಿ ದೈಹಿಕ ಶಿಕ್ಷಕರಿಗೆ ಪ್ರಥಮ ಮತ್ತು ದ್ವಿತೀಯ ಪಿಯುಸಿಯಲ್ಲಿ ಕನಿಷ್ಠ 240 ವಿದ್ಯಾರ್ಥಿಗಳಿದ್ದಲ್ಲಿ ಪೂರ್ಣ ಕಾರ್ಯಭಾರವೆಂದು ಪರಿಗಣಿಸಲಾಗಿದೆ. 240ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿದ್ದಲ್ಲಿ ಸಮೀಪದ ಸರ್ಕಾರಿ/ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಮಂಜೂರಾದ ದೈಹಿಕ ಶಿಕ್ಷಕರ ಹುದ್ದೆಗೆ ನಿಯೋಜಿಸಿ, ಕಾರ್ಯಭಾರ ಸರಿದೂಗಿಸಲು ಅವಕಾಶ ಕಲ್ಪಿಸಲಾಗಿದೆ.<br><br>ಪ್ರಸ್ತುತ ದೈಹಿಕ ಶಿಕ್ಷಕರಿಗೆ ನಿಗದಿಪಡಿಸಲಾದ ಕಾರ್ಯಭಾರವನ್ನು ಅಂದರೆ, ಕನಿಷ್ಠ ವಿದ್ಯಾರ್ಥಿಗಳ ಸಂಖ್ಯೆಯ ಮಿತಿಯನ್ನು ಪರಿಷ್ಕರಿಸಿ, 120 ವಿದ್ಯಾರ್ಥಿಗಳಿದ್ದಲ್ಲಿ ಪೂರ್ಣ ಕಾರ್ಯಭಾರವೆಂದು ಪರಿಗಣಿಸಿ, ಅನುದಾನಕ್ಕೆ ಒಳಪಡಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ. |

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ.

**ಸಂಖ್ಯೆ: ಇಡಿ 325 ಎಸ್‌ಎಲ್‌ಬಿ 2018)**